ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 6, May-June, 2024, Pp. 44-50
©*IIMRD*, Mysuru
IIMRD JOURNALS
www.iimrd.com

# ಸಾ. ಶಿ. ಮರುಳಯ್ಯನವರ ಕಾದಂಬರಿಗಳಲ್ಲಿ ವೈಚಾರಿಕತೆ

**ಡಾ. ಮುನಿರಾಜು ಎಸ್. ವಿ**
ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರು, ಜೈಹಿಂದ್ ಪದವಿ ಕಾಲೇಜು, ಬೆಂಗಳೂರು.

**ಸಾರಾಂಶ: (Abstract)**

*ಹೊಸ ಶಿಕ್ಷಣದ ಆಧುನಿಕ ಪ್ರವೇಶಗಳಲ್ಲಿ ಕಾದಂಬರಿಯೂ ಒಂದು. ಕಾದಂಬರಿ ಎಂಬುದು ಕಥನಕ್ಕಿಂತ ಭಿನ್ನವಾಗಿರಬೇಕೆಂಬ ಅರಿವು ಕೃತಿಕಾರರಲ್ಲಿ ಇದ್ದಂತೆ ಕಾಣುತ್ತದೆ. ಕಾದಂಬರಿಯ ಹುಟ್ಟಿಗೆ ಕಾರಣವಾದ ಅಂಶಗಳಲ್ಲಿ ಗದ್ಯದ ಬಹುರೂಪಿ ಬಳಕೆಯೂ ಒಂದಾಗಿದ್ದು. ಅದರ ಅವಶ್ಯಕತೆಯು ಹೆಚ್ಚಾಗಿದೆ ಎನ್ನಬಹುದು. ವೈಚಾರಿಕತೆ ಮತ್ತು ಭಾವುಕತೆಗಳ ನಡುವಿನ ಮಧ್ಯಮ ಮಾರ್ಗವನ್ನು ಅನುಸರಿಸಿರುವ ವಿಚಾರವಂತರು ತಮ್ಮೆಲ್ಲಾ ಇತಿಮಿತಿಗಳ ನಡುವೆಯೇ ತುಂಬು ಪ್ರಾಮಾಣಿಕವಾದ, ಸತ್ಯಕ್ಕೆ ಸಮೀಪವಾದ ತಮ್ಮ ಸರಳವಾದ ನೈತಿಕ ಧೈರ್ಯದ ಬದುಕು ನೀಡುವ ಅಪರಿಮಿತವಾದ ಆಸೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಅತಿ ಶಕ್ತಿಯುತವಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಸಕಲರು ಸಕಲರ ಒಳಿತಿಗಾಗಿ ಅರ್ಪಿಸಿಕೊಳ್ಳುವುದರ ಮೂಲಕವೇ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆನ್ನುವ ಹಂಬಲವನ್ನು ಹೊಂದಿದ್ದು, ಅದನ್ನು ಸಾಹಿತ್ಯದ ಮೂಲಕ ಹೊರಹಾಕಿದರು ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಡಾ. ಸಾ. ಶಿ. ಮರುಳಯ್ಯನವರ ಕಾದಂಬರಿಗಳಲ್ಲಿ ವೈಚಾರಿಕತೆ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ವೈಚಾರಿಕತೆ, ಸಾ. ಶಿ. ಮರುಳಯ್ಯ, ಸಂಸ್ಕೃತಿ, ನಾಡು–ನುಡಿ, ಸಮಾಜ.

## ಪೀಠಿಕೆ

ವೈಚಾರಿಕತೆಯು, ಹಿರಿಮೆಯನ್ನು ನಿರ್ಧರಿಸುವ ಮಹತ್ವದ ಸಂಗತಿಗಳಲ್ಲಿ ಒಂದು. ಉತ್ತಮ ಅನುಭವ ಪ್ರಪಂಚ ಹಾಗೂ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸಲು ಸಹಾಯವಾಗುತ್ತದೆ. ಇದು ಹೊಸ ದೃಷ್ಟಿಕೋನವನ್ನು ಹಾಗೂ ಅದರ ಸಾಧ್ಯತೆಯನ್ನು ಬಿಂಬಿಸಲು, ನಿರೀಕ್ಷಣಾ ಸಾಮರ್ಥ್ಯವನ್ನು ಅರಿವುಗೊಳಿಸಲು ಸಾಧ್ಯವಾಗುವುದು. ತಾನು ಚಿತ್ರಿಸುತ್ತಿರುವ ಅನುಭವದಲ್ಲಿ ಈ ಹಿಂದೆ ಗಮನಕ್ಕೆ ಬಾರದೆ ಉಳಿದಿದ್ದ ಜೀವನದ ಮೂಲಭೂತ ಸಮಸ್ಯೆಗಳು, ಗೊಂದಲಗಳು ಆಂತರಿಕ ತೊಡಕುಗಳ ಬಗ್ಗೆ ಇರುವ ಆಳವಾದ ತಿಳಿವಳಿಕೆಯು ವೈಚಾರಿಕತೆಯ ರೂಪದಲ್ಲಿ ಮೂಡುತ್ತದೆ. ಬದುಕಿನ ಮೂಲಭೂತ ಸಮಸ್ಯೆಗಳ ಆಳವಾದ ತಿಳುವಳಿಕೆಯಿಂದ ಹೊರಡುವ ಬದುಕಿನ ಅನುಭವದ ಸ್ವೀಕಾರ ಹಾಗೂ ಆಯ್ಕೆಗಳನ್ನು ನಿಯಂತ್ರಿಸುವುದೇ ವೈಚಾರಿಕತೆಯಾಗಿದೆ. ಜೀವನ ದೃಷ್ಟಿಯನ್ನು ಒಳಗೊಂಡ ಅನುಭವವು ಸಾಹಿತ್ಯದಲ್ಲಿ ಸ್ಥಾನ ಪಡೆಯಲು, ವೈಚಾರಿಕತೆಯು ಮುಖ್ಯ ಪಾತ್ರವನ್ನು ವಹಿಸುತ್ತದೆ. ಹೀಗೆ ಲೇಖಕನ ಆಳ ಅನುಭವದ

*Please cite this article as:* ಮುನಿರಾಜು ಎಸ್. ವಿ. (2024). ಸಾ. ಶಿ. ಮರುಳಯ್ಯನವರ ಕಾದಂಬರಿಗಳಲ್ಲಿ ವೈಚಾರಿಕತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 44–50

ಮೇಲೆ ವೈಚಾರಿಕತೆಯು ಅಡಗಿರುತ್ತದೆ. ಆದುದರಿಂದ ಇಲ್ಲಿ ಸಾ.ಶಿ.ಮ. ರವರ ವೈಚಾರಿಕತೆ ಕಾದಂಬರಿಯ ವಸ್ತುವಿಗೆ ಸಂಬಂಧಿಸಿದ ಚಿಂತನೆಯಾಗಿದೆ ಎಂಬುದನ್ನು ಗಮನಿಸುವುದು ಅವಶ್ಯಕವಾಗಿದೆ.

ಮನುಷ್ಯ ಜೀವನದ ನಡವಳಿಕೆಗಳಲ್ಲಿ ನಾಗರೀಕತೆ ಸಂಸ್ಕೃತಿಗಳು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಪಡೆದವುಗಳಾಗಿವೆ. ಆ ಕಾಲದಿಂದಲೂ ಮನುಷ್ಯ ಜೀವನ ಶಿಸ್ತುಗಳನ್ನು ರೂಪಿಸಿಕೊಳ್ಳುವಲ್ಲಿ ಅನೇಕ ಆವಿಷ್ಕಾರಗಳನ್ನು ಮಾಡಿಕೊಂಡಿದ್ದಾನೆ. ಮನುಕುಲದ ರಕ್ಷಣೆ ಪರಂಪರೆಯನ್ನು ಉಳಿಸುವ ಜವಾಬ್ದಾರಿ ಲೇಖಕನಿಗಿರುತ್ತದೆ. ಹಾಗಾಗಿ ಸಾ.ಶಿ.ಮರವರು ತಮ್ಮ ಸಾಹಿತ್ಯಿಕ ಕೃತಿಗಳಲ್ಲಿ ಇತಿಹಾಸವನ್ನು ಸೇರಿಕೊಂಡು ಇಲ್ಲಿ ಮೂಡಿರುವ ಚಿತ್ರಣಗಳಲ್ಲಿ ಒಳಿತಾಗಲಿ, ಕೆಡುಕಾಗಲಿ ಅವು ಇಂದಿನ ಜೀವನ ದರ್ಶನಕ್ಕೆ ಅನಿವಾರ್ಯತೆ ಇದೆ ಎಂಬ ಸಂದೇಶವನ್ನು ನೀಡುತ್ತಾರೆ.

'ರಾಣಾಪ್ರತಾಪ' ಕಾದಂಬರಿಯು ಐತಿಹಾಸಿಕ ವಸ್ತುವುಳ್ಳದ್ದಾಗಿದೆ. ಮೇವಾಡದ ಮಹಾಮಂಡಲೇಶ್ವರನಾದ ರಾಣಾಪ್ರತಾಪನು ಹುಟ್ಟು ಹೋರಾಟಗಾರ. ದೆಹಲಿಯ ಕುತಂತ್ರ ಸನ್ನಾಹ ಹಾಗೂ ಆಮಿಷಗಳಿಗೆ ಬಲಿಯಾಗದೆ ಹೋರಾಟ ಮಾಡುತ್ತಾನೆ. ಕೊನೆಗೂ ಸೋತಂತೆ ಕಾಣುವ ಪ್ರತಾಪನು ದೆಹಲಿಯ ದೊರೆಗೆ ಶರಣಾಗುವ ಪತ್ರವನ್ನು ರವಾನಿಸುತ್ತಾನೆ. ಈ ವಿಷಯ ತಿಳಿದ ಧೀರ ರಜಪೂತರ ಮನಸ್ಸುಗಳು ವಿಹ್ವಲಗೊಳ್ಳುತ್ತವೆ. ಪೃಥ್ವಿಸಿಂಹ ಅವನಿಗೊಂದು ಪತ್ರ ಬರೆದು ಅವನ ವೀರತನದ ಹಾಗೂ ರಾಜಸ್ಥಾನದ ಮಣ್ಣಿನ ಗುಣವನ್ನು ತಿಳಿಸುತ್ತಾನೆ. ಆ ತನ್ನ ತಪ್ಪಿನ ಅರಿವಾಗಿ ಪ್ರತಾಪಸಿಂಹ ಹೋರಾಟಕ್ಕಿಳಿಯುತ್ತಾನೆ. ಆ ಹೊತ್ತಿಗೆ ಕಾಲ ಮಿಂಚಿದ್ದರೂ ರಜಪೂತ ಸಾಮ್ರಾಜ್ಯ ಅನ್ಯರ ವಶವಾಗದಂತೆ ಎಚ್ಚರವಹಿಸುತ್ತಾನೆ. ಈ ಐತಿಹಾಸಿಕ ವಸ್ತುವಿನೊಂದಿಗೆ ಶೃಂಗಾರ, ವಿರಹ, ಪ್ರಣಯ, ರಾಜಕಾರಣ, ಯುದ್ಧ ವ್ಯಯ ಆಕಾಂಕ್ಷೆಗಳನ್ನು ಯಥೇಚ್ಛವಾಗಿ ಧಾರೆಯೆರೆದಿದ್ದಾರೆ. ನಾ.ಡಿಸೋಜರವರ ಮಾತಿನಲ್ಲಿ ಹೇಳುವುದಾದರೆ, "ಚರಿತ್ರೆಯ ಪುಟಗಳಲ್ಲಿ ನಾವು ಕೇಳಿದ ರಾಣಾಪ್ರತಾಪನ ಕಥೆ ಇಲ್ಲಿ ವಿವರವಾಗಿ ಬಂದಿದೆ. ಅಂದಿನ ಜನ ಜೀವನ, ಆಚಾರ ವಿಚಾರಗಳನ್ನು ಚಿತ್ರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಪುಸ್ತಕ ಓದಿ ಬದಿಗಿರಿಸಿದಾಗಲೂ ಮೇವಾಡ ಸುತ್ತಲೂ ಆ ಕಾಡು. ಕುದುರೆಗಳ ಖುರಪುಟದಿಂದ ಯುದ್ಧ, ಕೋಲಾಹಲ ಮನಸ್ಸಿನಲ್ಲಿ ಉಳಿದಿರುತ್ತದೆ. ಹಾಗೆಯೇ ರಾಣಾ, ಶಕ್ತಿ ಬಿಜಲಿಯ ವ್ಯಕ್ತಿತ್ವ"[1] ವು ದೇಶಭಕ್ತನೊಬ್ಬನ, ಪ್ರಜಾಪಿತನೊಬ್ಬನ ಮನಸನ್ನು ಹೊಕ್ಕಿದೆ ಎಂದಿದ್ದಾರೆ. ಇಂದಿನ ಜನಮಾನಸದಲ್ಲಿ ತಾಯಿನಾಡು, ನುಡಿ ಸೇವೆ, ಮಣ್ಣಿನ ಮಮತೆಯನ್ನು ಪ್ರತಿಯೊಬ್ಬ ಪ್ರಜೆಯು ಒಳಗೊಳ್ಳಬೇಕೆಂಬ ಸಂದೇಶವನ್ನು ತಿಳಿಸುತ್ತಾರೆ ಕಾದಂಬರಿಕಾರರು.

ಸಾಹಿತಿಯೊಬ್ಬನ ಬದುಕಿನ ಬವಣೆಯಲ್ಲಿ "ಯಾವುದು ಅವರ ಮನಸ್ಸನ್ನು ಅರಳಿಸಿತೋ ಕುತೂಹಲವನ್ನು ಕೆರಳಿಸಿತೋ ಅವೆಲ್ಲಾ ಬರಹವಾಗಿ ಪರಿಣಮಿಸಿದೆ. ಸಾಹಿತಿಯಾದವನ ಮೊದಲನೆಯ ಕೆಲಸವೆಂದರೆ, ಆದಷ್ಟು ಪ್ರಾಮಾಣಿಕವಾಗಿ ಸುತ್ತಣ ಸಮಾಜವನ್ನು, ಅದು ಒಳಗೊಂಡಿರುವ ಜನಗಳನ್ನು ಅವರ ಬದುಕಿನ ಬಗೆಯನ್ನು ತಿಳಿಯುವುದು".[2] ಅವರ ಕಾದಂಬರಿಗಳು ಬದುಕಿನ ಬಗೆಗಿನ ನೈಜತೆಯನ್ನು

[1] ವಾಗೀಷ ಎಂ. ಆರ್. (2012) ಸಾ.ಶಿ. ಮರುಳಯ್ಯನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ. ಮಧುರೈ ಕಾಮರಾಜ ವಿಶ್ವವಿದ್ಯಾಲಯ. ಪುಟ. 229

[2] ವಿಜಯಲಕ್ಷ್ಮಿ ಕೆ.ಎಂ. (2004). ಸಾಹಿತ್ಯ ಮತ್ತು ಸುತ್ತಣ ಸಮಾಜ, ಕಿರಣ್ ಬುಕ್ ಡಿಸ್ಟ್ರಿಬ್ಯುಟರ್ಸ್. ಪುಟ–68.

ಹಸಿ ಹಸಿ ಚಿತ್ರಗಳನ್ನು ತೆರೆದಿಡುತ್ತವೆ. ಇಂತಹ ಸೃಜನಾತ್ಮಕ ವಾಸ್ತವ ಚಿತ್ರಣಗಳು ಅವರ ಕಾದಂಬರಿಗಳ ವಸ್ತುವಾಗಿದ್ದು, ವಾಸ್ತವ ಜೀವನಕ್ಕೆ ತೀರಾ ಹತ್ತಿರವಾಗಿವೆ. ಮನುಷ್ಯ ಸ್ವಭಾವ ಹಾಗೂ ಮಾನವ ಸಂಬಂಧದ ಮೂಲರೂಪಗಳ ಮಾದರಿಗಳನ್ನು ಒದಗಿಸುತ್ತವೆ. ಮನುಷ್ಯ ಸಹಜ ಹಂಬಲ, ತೊಳಲಾಟ, ಅನಿಸಿಕೆ, ಭಾವನೆ, ದ್ವಂದ್ವ, ಸಂಘರ್ಷ, ನೋವು–ನಲಿವು, ತಿರಸ್ಕಾರ, ಕನಸು ಇತ್ಯಾದಿಗಳ ಮೂಲಕ ಬೆಳೆಯುವ ಪಾತ್ರಗಳ ಹಾಗೂ ಸನ್ನಿವೇಶಗಳ ಮಾನಸಿಕ ತುಮುಲಗಳಿಗೆ ಕಾರಣವನ್ನು ಒದಗಿಸುತ್ತವೆ.

ನಾವು ವಿಚಾರವಂತರಾಗಬೇಕು ಸಮಾಜವು ಪ್ರಗತಿ ಪಥದಲ್ಲಿ ಮುನ್ನಡೆಯಬೇಕಾದರೆ ಸಮಾಜದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳು ಅಂತೆಯೇ ಮೌಢ್ಯ, ಮೂಢನಂಬಿಕೆಗಳು, ಸ್ತ್ರೀ ಶೋಷಣೆ ಬಡವರ ಮೇಲಿನ ಆಕ್ರಮಣ, ಕೀಳರಿಮೆ, ಲಿಂಗಭೇದ, ಜಾತಿಪದ್ಧತಿ, ವರ್ಗವ್ಯವಸ್ಥೆ, ವರ್ಣವ್ಯವಸ್ಥೆಯ ವಿರುದ್ಧದ ಧ್ವನಿ ಸಾ.ಶಿ.ಮ.ರವರ ಕೃತಿಗಳಲ್ಲಿ ವ್ಯಕ್ತವಾಗಿದೆ. "ಎಲ್ಲದರ ಅಂತ್ಯಕ್ಕೂ ಹೊಸೆದುಕೊಂಡೇ ಇಹುದು ಹೊಸತೊಂದು ನಾಂದಿ!"[3] ಅಂತೆಯೇ ದೈವ ಧರ್ಮದ ಬಗೆಗಿನ ಅನಿಸಿಕೆಗಳು, ಜನರ ದಾರುಣ ಬದುಕಿನ ಚಿತ್ರಣದ ಮೂಲಕ ನವಸಮಾಜವೊಂದನ್ನು ಕಟ್ಟಬೇಕಾಗಿರುವುದು ಅತ್ಯವಶ್ಯಕವಾಗಿದೆ. ಹಾಗೆಯೇ ಪ್ರಸ್ತುತದಲ್ಲಿನ ಕೋಮುವಾದ, ಅಸಮಾನತೆ, ಸೋಲು, ಕ್ರೌರ್ಯ, ದ್ವೇಷಾಸೂಯೆ ಮುಂತಾದ ಆಗುಹೋಗುಗಳು ನಮ್ಮ ಸಮಾಜದ ಸ್ವಾಸ್ಥ್ಯವನ್ನು

ಹಾಳುಮಾಡಿವೆ. ಭಾರತೀಯರ ಜೀವನದಲ್ಲಿ ಅಂತ:ಸತ್ವವಾಗಿ ಪುಟಿದೆದ್ದ ಧರ್ಮವು ಮಾನವನನ್ನು, ಮಾನವ ಸಮಾಜವನ್ನು ಪರಿಪೂರ್ಣತೆಯಡೆಗೆ ಕೊಂಡೊಯ್ಯುವ, ಎತ್ತಿ ಹಿಡಿಯುವ, ಪೋಷಿಸುವ, ಪ್ರಚೋದಿಸುವ, ಧಾರಣ ಮಾಡುವ ಆಂತರಿಕ ಶಕ್ತಿಯಾಗಿದೆ. ಮನುಷ್ಯ ತನ್ನೆಲ್ಲ ಊಹಾತ್ಮಕ ವಿಚಾರಗಳಿಂದ ಹೊರಬಂದು, ಹೊರಪ್ರಲೋಭನೆಗಳಿಗೆ ಮಾರು ಹೋಗದಂತೆ ನೀತಿಯುತವಾಗಿ ಮಾನವೀಯತೆಯೆಡೆಗೆ ನಡೆಸುವ ಚೈತನ್ಯಶಕ್ತಿಯೇ ಧರ್ಮವಾಗಿದೆ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

'ಹೇಮಕೂಟ' ಕಾದಂಬರಿಯಲ್ಲಿ 'ನಾಡ ಗುಡಿಯನ್ನು ತನ್ನ ನೆತ್ತಿಯ ಮೇಲೆ ಹೊತ್ತು ಗತಕಾಲದ ಇತಿಹಾಸ ಸಾಕ್ಷಿಯಾಗಿ ಪವಿತ್ರ ಪಂಪಾಕ್ಷೇತ್ರದಲ್ಲಿ ಹೇಮಕೂಟ ನಿಂತಿದ್ದರೆ, ಕನ್ನಡ ನುಡಿಯ ಕೀರ್ತಿಪತಾಕಿಯನ್ನು ಹೊತ್ತು ಪುರಂದರದಾಸರೆಂಬ ಹೇಮಕೂಟ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿಂತಿದೆ. "ಇಲ್ಲಿ ಪುರಂದರದಾಸರ ಭವ್ಯ ಜೀವನವನ್ನು ಲೋಕ ಸಹಜವಾದ ದೃಷ್ಟಿಯಲ್ಲಿ ನೋಡಿದ್ದೇನೆ. ಲೋಭಿಯಾಗಿದ್ದ ವ್ಯಕ್ತಿ ಮಹಾತ್ಯಾಗಿಯಾಗಬೇಕಾದರೆ ಪ್ರಬಲ ಕಾರಣ ಯಾವುದಿರಬಹುದೆಂದು ಊಹಿಸಿ, ಮನಶ್ಶಾಸ್ತ್ರೀಯವಾಗಿ ನಿರೂಪಣೆ ಮಾಡಿಕೊಂಡು ಹೋಗಿದ್ದೇನೆ. ಪವಾಡಗಳನ್ನು ನಾನು ಒಪ್ಪುವುದಿಲ್ಲ; ಅದರಲ್ಲಿ ನನಗೆ ನಂಬಿಕೆಯಿಲ್ಲ"[4] ಈ ಮಾತುಗಳನ್ನು ಲೇಖಕರೇ ಹೇಳಿಕೊಂಡಿರುವುದರಿಂದ ಸಹಜತೆಗೆ ಹೆಚ್ಚು ಒತ್ತು ಕೊಟ್ಟಿರುವುದು ಸ್ಪಷ್ಟವಾಗಿದೆ.

ಶೀನಪ್ಪನಾಯಕ ಪುರಂದರದಾಸನಾದ ಈ ಕತೆಯಲ್ಲಿ ಆತನ ಪತ್ನಿ ಸರಸ್ವತಿ ವಿಷಪ್ರಾಸನದಿಂದ ಅಸು ನೀಗಿದ ನಂತರ ಶೀನಪ್ಪನಾಯಕ ವೈರಾಗ್ಯ ತಾಳುವ ಪ್ರಸಂಗವಿದೆ. ಎಲ್ಲ ಆಸ್ತಿ ಒಡವೆ ವಸ್ತುಗಳನ್ನು

[3] ಮರುಳಯ್ಯ ಸಾ.ಶಿ. (2001). *ಸಮಗ್ರ ಕಾವ್ಯ.* ಸ್ವಪ್ನ ಬುಕ್ ಹೌಸ್. ಪುಟ. 145
[4] ಬಸವರಾಜು ಆರ್. (1994). *ಸಾಶಿಮ ಬದುಕು–ಬರಹ.* ಶ್ರೀರಂಗ ಪ್ರಕಾಶನ. ಪುಟ 49

ದಾನಗೈದ ಶಿನಪ್ಪನಾಯಕ ವ್ಯಾಸರಾಯರಿಂದ ದೀಕ್ಷೆ ಪಡೆಯುತ್ತಾನೆ. ವ್ಯಾಸರಾಯರ ಮಠದಲ್ಲಿ ವ್ಯಾಸಕೂಟ– ದಾಸಕೂಟ ಎರಡು ಪಂಗಡಗಳಾಗುತ್ತವೆ. ಅವೇನೇ ಇದ್ದರೂ, ನೀವು ಕನ್ನಡದ ಹೇಮಕೂಟ'ವೆಂದು ವ್ಯಾಸರಾಯರು ಪುರಂದರದಾಸರನ್ನು ಪ್ರಶಂಸಿಸುತ್ತಾರೆ.

ಹಾಗೆಯೇ ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಾಯಕ ಧರ್ಮವನ್ನು, ಪ್ರಸಾದ ಸೇವೆಯನ್ನು, ನುಡಿಸೇವೆಯನ್ನಿಟ್ಟುಕೊಂಡು ಸಾ.ಶಿ. ಮರುಳಯ್ಯನವರು 'ಮಹಾಪ್ರಸಾದಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ.

ಇದರಲ್ಲಿ ಕಾಲ್ಪನಿಕತೆಗಿಂತ ವಾಸ್ತವಿಕತೆಯೇ ಎದ್ದು ಕಾಣುತ್ತದೆ. ಶ್ರೀ ಶಿವಬಸವಸ್ವಾಮಿಗಳವರದು, "ತುಂಬಿದ ಕೊಡದಂತಹ ಗಾಂಭೀರ್ಯ ಮತ್ತು ರತ್ನಗಳನ್ನು ಗರ್ಭೀಕರಿಸಿಕೊಂಡಿರುವ ಸಮುದ್ರದಂತಹ ವ್ಯಕ್ತಿತ್ವ. ಇವರ ಸೇನೆಗೆ ಸಾವಿರ ತೋಳುಗಳು! ಇಂತಹ ಸೇವಾಮೂರ್ತಿಯ ಬಣ್ಣನೆಗೆ ಆದಿಶೇಷನ ಸಾವಿರ ನಾಲಗೆಗಳು ಸಾಲವು. ಆದರೂ ಒಂದು ನಾಲಗೆಯುಳ್ಳ ಸಾ.ಶಿ.ಮ ಅವರು ಹಲವು ರಾಗಗಳಲ್ಲಿ ಹಾಡಿದ್ದಾರೆ"[5] ಎನ್ನುವ ಸಿ. ವಿ. ಜಮಖಂಡಿಮಠ ಹಾಗೂ ಜಿ.ಎಂ.ಹಿರೇಮಠರ ಮಾತುಗಳು ನಿಜಕ್ಕೂ ಅರ್ಥಪೂರ್ಣ ಎನ್ನಿಸುತ್ತದೆ.

ಧರ್ಮ ಅವನತಿಗೊಂಡರೆ ಸಮಾಜದ ಏಳ್ಗೆ ಸಾಧ್ಯವಿಲ್ಲ ಅದರಿಂದ ದುಷ್ಪರಿಣಾಮವು ಉಂಟಾಗುತ್ತದೆಂಬ ಅಂಶ 'ಮಹಾಪ್ರಸಾದಿ' ಕಾದಂಬರಿಯ ಪಾತ್ರಗಳಾದ ಡಾ. ಶಿವಪ್ರಸಾದ್ ಮತ್ತು ನಿಡುವಳ್ಳಿ ಮಠದ ಮಲ್ಲಿಕಾರ್ಜುನಯ್ಯ ಅವರ ಸಂಭಾಷಣೆಯಲ್ಲಿ ವ್ಯಕ್ತಗೊಂಡಿದೆ. ಗುರುಲಿಂಗ ಜಂಗಮ ವಸ್ತುವೊಂದು ಇದನ್ನು ತಿಳಿಯದ ವೀರಶೈವ ಧರ್ಮದಲ್ಲಿ ಭಿನ್ನತೆಯನ್ನು ತರುವವರನ್ನು ಕಂಡು ಲೇಖಕರ ಮನನೊಂದಿದೆ. ಮಠ–ಮಾನ್ಯ–ಪೀಠಗಳ ಬಗ್ಗೆ ಲೇಖಕರಿಗೆ ಅಭಿಮಾನ, ಗೌರವ ಭಕ್ತಿಗಳಿದ್ದರೂ ಕೂಡಾ ಅವುಗಳಲ್ಲಿ ಕಂಡು ಬರುವ ಸಂಕುಚಿತ ಮನೋಭಾವವನ್ನು ಕಂಡು ಬೇಸರಗೊಂಡಿದ್ದಾರೆ. ಸ್ವಾರ್ಥಕ್ಕಾಗಿ ಮಠಗಳನ್ನೂ, ಮಠಾಧಿಪತಿಗಳನ್ನೂ ಉಪಯೋಗಿಸಿಕೊಳ್ಳುವವರ ಬಗ್ಗೆ ಅಸಹನೆ ಸಾತ್ವಿಕ ಕ್ರೋಧ ವ್ಯಕ್ತವಾಗಿದೆ. 'ತನ್ನಿಚ್ಚೆಗೆ ಗೆದ್ದಲ ಹುಳು ಹುತ್ತ ಕಟ್ಟುತ್ತದೆ, ಹಾವು ಆ ಹುತ್ತಕ್ಕೆ ಬಂದು ವಾಸ ಮಾಡುತ್ತದೆ'. ಹೀಗೆ ಸ್ವಾರ್ಥಿಗಳೆಂಬ ಶಿಷ್ಯರು ಮಠಮಾನ್ಯಗಳಲ್ಲಿ ಹಾವುಗಳಂತೆ ವಾಸಿಸುತ್ತಾ ಧರ್ಮದ ಅವನತಿಗೆ ಕಾರಣರಾಗುತ್ತಾರೆ. ಗುರುಗಳು ಸಮಾಜದಿಂದ ಬೇರೆಯಾಗಿ ಅಡ್ಡದಾರಿ ಹಿಡಿದರೆ ಜನರೇ ಜಂಗಮರಾಗಿ ಅವರನ್ನು ತಿದ್ದುವ ಮೂಲಕ ಜಾಗೃತಗೊಳಿಸಬೇಕೆಂಬ ವೈಚಾರಿಕ ಅಂಶ ಈ ಕಾದಂಬರಿಯಲ್ಲಿದೆ. ಸಮಾಜದ ಸ್ವಾಸ್ಥ್ಯವನ್ನು ಕದಡುವಂತಹ ಪರಿಸ್ಥಿತಿಯಲ್ಲಿ ಜನತೆ ಜಾಗೃತರಾಗಿ ಬಹಿಷ್ಕಾರವನ್ನು, ಘೋಷಣೆಯನ್ನು ಕೂಗುವ ಮೂಲಕ ಕಪಟ ಸನ್ಯಾಸಿಗಳ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಉತ್ತಮ ನಿದರ್ಶನಗಳಾಗಿವೆ. ಸಂಕಲ್ಪ ಸ್ವಪ್ರಯತ್ನ ಮತ್ತು ಶೀಲಸಂಪನ್ನತೆಯಿದ್ದರೆ ಸಾಮಾನ್ಯನೂ ಸಾಧಕನಾಗುತ್ತಾನೆ ಎಂಬುದು ವಾಸ್ತವದ ಸಂಗತಿ.

[5] ವಾಗೀಷ ಎಂ. ಆರ್. (2012). ಪೂರ್ವೋಕ್ತ. ಪುಟ–234

ಧಾರ್ಮಿಕ ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಸಾ.ಶಿ.ಮ. ರವರಿಗೆ ಅಪಾರ ಭಕ್ತಿ ಇದೆ. ಧಾರ್ಮಿಕ ಸಂಸ್ಥೆಗಳು ಪರಿಶುದ್ಧವಾಗಿದ್ದು, ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುವ ಮೂಲಕ ರಾಷ್ಟ್ರದ ಏಳ್ಗೆಗೆ ಉತ್ತಮ ಸಮಾಜ ಕಟ್ಟುವ ಕಾರ್ಯ ಹಾಗೂ ಹಾದಿಯನ್ನು ತೋರಿಸಬೇಕು ಎಂಬ ಮಹತ್ತರವಾದ ಕಳಕಳಿಯಿದೆ. ಈ ಕಾರಣದಿಂದಾಗಿ ಧರ್ಮದ ಅನೇಕ ವಿಚಾರಗಳ ವಿಶ್ಲೇಷಣೆ ಇವರ 'ಮಹಾಪ್ರಸಾದಿ' ಕಾದಂಬರಿಯಲ್ಲಿದೆ. "ಗುರು–ವೀರಕ್ತರ ಮಡಿತನದ ಭಿನ್ನ–ಭಾವನೆಗಳನ್ನು ನೋಡಿ ಲಿಂಗಧಾರಿಗಳಾದ ಸಾದರು, ನೊಣಬರು, ಕುಂಬಾರರು, ಮಡಿವಾಳರು, ಹಡಪದವರು ತಮ್ಮಲ್ಲೇ ಕೆಲವರು ಜಂಗಮರನ್ನು ಸೃಷ್ಟಿಸಿಕೊಂಡರು. ಸಮಾಜದ ನಾಯಕರು, ಸ್ವಾಮಿಗಳು, ಬುದ್ಧಿ ಜೀವಿಗಳು ಹಣವಂತ ವರ್ತಕರು ಇವರೇ ಮೊದಲಾದವರ ಕೈಗೆ ಸಿಕ್ಕು ವಿಶ್ವಧರ್ಮವೆನಿಸಬಹುದಾಗಿದ್ದ ವೀರಶೈವ ಕೇವಲ ಒಂದು ಮತವಾಗಿ ಪರಿಣಾಮ ಪಡೆಯಿತು. ಇನ್ನೂ ಉಳಿದ ಅಮಾಯಕ ಅವಿದ್ಯಾವಂತ, ಅಶಕ್ತ ಜನ ಹಣವಂತರ

ಗುಲಾಮರಾಗಿ, ಇಲ್ಲವೇ ಮತದ ನಾಯಿಗಳಾಗಿ ಬದುಕು ಮಾಡಿದವು. ಬಡಜನರ ಕಣ್ಣಿಗೆ ಮಣ್ಣೆರಚಿ, ಅವರ ಮತಗಿಟ್ಟಿಸಿಕೊಂಡು, ನೋಟು ಮಾಡುತ್ತಿರುವ ರಾಜಕಾರಣಿಗಳಂತೆ ನಮ್ಮ ನಿಮ್ಮಂತಹ ಸಮೀಪದ ಹಿರಿಯರೂ ಮಠಾಧಿಪತಿಗಳಂತೆ ವರ್ತಿಸಿದರು. ರಕ್ಷಕರಾದವರೇ ಸಮಾಜದ ಭಕ್ಷಕರಾದರು! ಅದರಿಂದಾಗಿ ನಮ್ಮ ಭಂಡಾರಿ ನೇಕಾರ, ಕುಂಬಾರ, ಬಡಗಿ, ಚಮ್ಮಾರ, ಕುರುಬ, ಕಮ್ಮಾರ, ಮಡಿವಾಳ, ವರ್ತಕ ಮೊದಲಾದವರು ಭಂಡಾರಿಯಾರಿ, ನೇಕಾರರಾಗಿ, ಕುಂಬಾರರಾಗಿ. ಬಡಗಿಯಾಗಿ, ಚಮ್ಮಾರನಾಗಿ, ಕುರುಬನಾಗಿ, ಮಡಿವಾಳಿಯಾಗಿ, ವರ್ತಕನಾಗಿಯೇ ಉಳಿದರು, ವೀರಶೈವರಾಗಲೇ ಇಲ್ಲ. ಇಂತೆಲ್ಲ ಕಾಯಕಯೋಗಿಗಳನ್ನು ಪಡೆದ ಲಿಂಗನಂತೆ ಸಮಾಜ ಅವರೆಲ್ಲರನ್ನು ತನ್ನ ರಕ್ಷಣೆಯಲ್ಲಿಟ್ಟುಕೊಂಡು ರಕ್ಷಿಸಿಕೊಂಡು ಬರುವ ಸೌಭಾಗ್ಯವನ್ನು ಪಡೆಯಲೇ ಇಲ್ಲ"[6] ಎನ್ನುವ ಶ್ರೀಶಿವಬಸವಸ್ವಾಮಿಗಳ ಈ ಒಂದು ಯೋಚನೆಯೇ ಸಾಕು, ಅವರು ಹೊಂದಿದ್ದ ಹೃದಯ ವೈಶಾಲ್ಯತೆಗೆ ವೀರಶೈವ ಧರ್ಮವನ್ನು ಬೆಳೆಸಬೇಕಾದ ಅಗತ್ಯತೆಯನ್ನು ಹಾಗೂ ಅದು ಪಡೆಯಬೇಕಾದ ಜಾತ್ಯಾತೀತತೆಯನ್ನು ತಮ್ಮ ಜೀವನದುದ್ದಕ್ಕೂ ಬೋಧಿಸಿದ್ದಾರೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿಯೂ ಕೂಡಾ ಜಾತಿಗೊಂದು ಮಠ. ಉಪಜಾತಿಗೊಂದು ಮಠ–ಮಾನ್ಯಗಳು ಸೃಷ್ಟಿಯಾಗುತ್ತಿದ್ದು, ರಾಜಕೀಯ ತಿರುವುಗಳನ್ನು ಪಡೆಯುತ್ತಿರುವುದು ವಿಪರ್ಯಾಸವೇ ಸರಿ ಎಂಬಂತಾಗಿದೆ.

"ನಿರೂಪಣಾ ಶೈಲಿಯಂತೂ ಉತ್ಸಾಹದಾಯಕ, ಮನೋಹರ, ಧಾರ್ಮಿಕ ವ್ಯಕ್ತಿ ವಿಚಾರಗಳೇ ಪ್ರಧಾನವಾಗಿದ್ದರೂ ಎಲ್ಲಿಯೂ ಬೇಸರ ಉಂಟಾಗದಂತಹ ಲವಲವಿಕೆಯ ಸಂಭಾಷಣೆಗಳು ವರ್ಣನೆಗಳಿವೆ. ಮಹಾಪ್ರಸಾದಿ ಧಾರ್ಮಿಕ ಸಾಹಿತ್ಯ ನೂಲಿಕೆಗೆ ಒಂದು ಅಪೂರ್ವ ಕೊಡುಗೆಯಾಗಿದೆ"[7] ಎಂಬ ಮಾತುಗಳು ಅರ್ಥಪೂರ್ಣವಾದುವು. ಶ್ರೀ ಶಿವಬಸವಸ್ವಾಮಿಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಉಚಿತ ವಿದ್ಯಾಭ್ಯಾಸ ನೀಡುವ ಸಲುವಾಗಿ ಹಲವಾರು ವಿದ್ಯಾಸಂಸ್ಥೆಗಳನ್ನು ತೆರೆದಿದ್ದಾರೆ. ಅವೆಲ್ಲವೂ ಸುವ್ಯವಸ್ಥಿತವಾಗಿ ನಡೆಯುತ್ತಿವೆ. ನಾಗನೂರ ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರಗಳು ಅನೇಕ ಜನಹಿತ ಕಾರ್ಯಗಳಲ್ಲೇ

[6] ವಾಗೀಷ ಎಂ. ಆರ್. (2012). ಪೂರ್ವೋಕ್ತ. ಪುಟ–235
[7] ಅದೇ. ಪುಟ–219

ಸಾಗುತ್ತ ಬಂದಿವೆ. ಇದು ಶ್ರೀ ಶಿವಬಸವ ಸ್ವಾಮಿಗಳ ಕತೃತ್ವಕ್ಕೆ ಸಾಕ್ಷಿಯಾಗಿ ನಿಂತಿದೆ. ದಾಸೋಹದ ಪರಿಕಲ್ಪನೆಯಿಂದ ಕೂಡಿ ಬಾಳುವ ಸಮಾನತೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಆಸ್ತಿ ಮಾಡುವುದು ಸಂಪತ್ತನ್ನು ಕೂಡಿಡುವುದು. ಇಂತಹವುಗಳನ್ನು ಬಿಟ್ಟು ಪ್ರಕೃತಿಯಲ್ಲಿ ಇರುವ ಸಂಪತ್ತನ್ನು ಸದ್ವಿನಿಯೋಗಪಡಿಸಿಕೊಳ್ಳುವ ಮಾರ್ಗವನ್ನು ಕಾಣುತ್ತೇವೆ. ಸಮಾಜದಲ್ಲಿ ಆರ್ಥಿಕ ಸಾಮಾಜಿಕ ಸಮಾನತೆ ನೆಲೆಸಲು ಹಂಚಿಕೊಂಡು ಬದುಕುವ ಚಿತ್ರಣವೂ ಇಲ್ಲಿದೆ.

ಧರ್ಮಗ್ರಂಥಗಳಲ್ಲಿ ಅಡಗಿರುವ ಒಟ್ಟು ರೂಪವೇ ಮೌಲ್ಯವಾಗಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಮೌಲ್ಯವೂ ಜನಜೀವನದ ವ್ಯಕ್ತಿತ್ವವನ್ನು ಶುದ್ಧೀಕರಿಸಿಕೊಳ್ಳುವ ನೈತಿಕತೆಯನ್ನು ಹೊಂದುವ ನಿಟ್ಟಿನಲ್ಲಿ ಪ್ರಮುಖವಾಗುತ್ತದೆ. ಇದು ಸಾಮಾಜಿಕ, ರಾಜಕೀಯ, ನೈತಿಕ, ಆರ್ಥಿಕ ಇವುಗಳೆಲ್ಲದರಲ್ಲಿಯೂ ಹಾಸುಹೊಕ್ಕಾಗಿದೆ. ಒಂದು ಸಮಾಜವು ಆದರ್ಶದ ಕಡೆಗೆ ಸಾಗಬೇಕಾದರೆ ಮೌಲ್ಯಯುತವಾದ ಅಂಶಗಳನ್ನು ಹೊಂದಿರಬೇಕಾಗುತ್ತದೆ. ಆಗ ಜನರು ತಮ್ಮ ಲೋಕ ವ್ಯವಹಾರಗಳಲ್ಲಿ ಆತ್ಮೀಯತೆಯ ಪ್ರೀತಿಯನ್ನು ಉಳಿಸಿಕೊಂಡು ಹೋಗುತ್ತಾರೆ. ಇದು ರಾಷ್ಟ್ರಪ್ರೇಮ ಮಾನವ ಪ್ರೇಮಿಗಳಲ್ಲಿ

ಬದ್ಧತೆಗೆ ಒಳಗೊಳ್ಳುತ್ತದೆ. ಮನಷ್ಯನ ಮೂಲಭೂತ ಅವಶ್ಯಕತೆಗಳು ಹಾಗೂ ಜವಾಬ್ದಾರಿಗಳನ್ನು ಕೇಂದ್ರೀಕರಿಸಿಕೊಂಡು ಆ ಮೂಲಕ ಮೌಲ್ಯಗಳನ್ನು ನೈತಿಕ ಹಾಗೂ ಸಾಮುದಾಯಿಕ ಪ್ರಜ್ಞೆ ಮೂಡುವಂತೆ ಮಾಡಬೇಕು. ಆಗ ಮೌಲ್ಯವು ಮನುಷ್ಯನ ಜೀವನದ ಸಮಗ್ರತೆಯನ್ನು ಒಳಗೊಳ್ಳಬಹುದಾದ ಅಂಶವಾಗಿ ಮಾರ್ಪಡುತ್ತದೆ. ಮನುಷ್ಯನ ಬದುಕು ನಾಗರೀಕತೆಯತ್ತ ಸಾಗುತ್ತಾ ಸೌಕರ್ಯ ಸವಲತ್ತು ಆಧುನಿಕತೆಯಲ್ಲಿ ಸಂಕುಚಿತಗೊಳ್ಳುತ್ತಾ ಹೋಗಬಹುದು. ಆದರೆ ಮಾನವೀಯತೆ ಎಂಬುದು ಆ ದೃಷ್ಟಿಕೋನವನ್ನು ಮೀರಿ ನಡೆಯುತ್ತದೆ. ಆಧುನಿಕತೆ ಸಂಸ್ಕೃತಿಗಳಲ್ಲಿ ಭಿನ್ನತೆಗಳಿದ್ದರೂ ಮನುಷ್ಯ ಜೀವಿತದ ಅವಧಿಯಲ್ಲಿ ಹೇಗೆ ಬದುಕಿದ, ಹೇಗೆ ಬದುಕಲು ಸಹಕಾರಿಯಾದ ಎನ್ನುವುದು ಮುಖ್ಯವಾಗುತ್ತದೆ. ಅವುಗಳು ತಮ್ಮ ಮೂಲಕ ಮಾನವೀಯ ಮೌಲ್ಯಗಳನ್ನು ನೀಡುತ್ತವೆ. ಸ್ವಾತಂತ್ರ್ಯ, ಸಾಮಾಜಿಕ ಹಿತಾಸಕ್ತಿ, ಧಾರ್ಮಿಕ ನಂಬಿಕೆಗಳು ಮತ್ತಿತರ ಅಂಶಗಳಲ್ಲಿ ಭಿನ್ನತೆಯನ್ನು ಕಾಣುತ್ತವೆ. ಆದರೆ ಒಂದು ವೈಚಾರಿಕವಾದ ಸಾಮಾಜಿಕ ಬದ್ಧತೆಯು ಮಾನವೀಯ ಮೌಲ್ಯಗಳನ್ನು ಸಮೀಕರಿಸುತ್ತದೆ.

ಮನುಷ್ಯನಲ್ಲಿ ಸಮರ್ಪಣಾ ಭಾವ ಅತೀ ಅಗತ್ಯವೆನಿಸುತ್ತದೆ. ಯಾವ ಪರಮಾತ್ಮನ ಸಾನಿಧ್ಯದಿಂದ ಪ್ರಾಣ ಬುದ್ಧಿ, ಮನಸ್ಸು, ಆತ್ಮ, ದೇಹ, ಐಶ್ವರ್ಯಗಳು ಅತ್ಯಂತ ಪ್ರಿಯವಾಗುತ್ತವೊ ಅವನಿಗಿಂತ ಬೇರೆಯಾದ ಪ್ರಿಯಕರವಾದ ವಸ್ತು ಯಾವುದೂ ಇಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಾನೆ. ಆದರೆ ನಿಜವಾದ ಭಕ್ತನಿಗೆ ದೈವ ಒಂದೇ ಕೇಂದ್ರವಾಗಿರುತ್ತದೆ. ಅವನಿಗೆ ಜಾತಿ, ಕುಲ, ಅಂತಸ್ತು, ವರ್ಗ, ಮೇಲು, ಕೀಳು ಭಾವಗಳು ಇಲ್ಲವಾಗಿರುತ್ತವೆ. ಆಗಾಗಿ ಭಕ್ತನು ರೂಪುಗೊಳ್ಳುವುದು ಈ ಅಂತರ್ ಮೌಲ್ಯಗಳಿಂದಾಗಿರುತ್ತದೆ. ಇತರರೊಂದಿಗೆ ಸಂಬಂಧಗಳಲ್ಲಿ ಮೋಸ, ದರ್ಪ, ಅಹಂಕಾರದ ಭಾವಗಳನ್ನು ಬಿಟ್ಟು ವಿನಯತೆಯನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿ ಆಚರಣೆಗೆ ತರುವಂತಿರಬೇಕು. ಆಗ ಮನುಷ್ಯರಲ್ಲಿ ವಿನಾಕಾರಣದ ದ್ವೇಷ, ಜಗಳ, ದುಷ್ಕೃತ್ಯಗಳು ಇಲ್ಲದಂತಾಗುತ್ತವೆ. ಆದ್ದರಿಂದ ಸಾಮಾಜಿಕ ಸ್ಥಿತಿಗತಿಗಳು ಉತ್ತಮವಾಗಿರುತ್ತವೆ ಎಂಬ ಸಂದೇಶ ಈ ಕಾದಂಬರಿಯಲ್ಲಿ ದಟ್ಟವಾಗಿ ಮೂಡಿಬಂದಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಕಾದಂಬರಿಗಳನ್ನು ಗಮನಿಸಿದಾಗ, ಇಂದು ಮಾನವ ಜಗತ್ತಿನ ಅಳಿವು ಉಳಿವುಗಳು ನಾವು ಆರಿಸಿಕೊಳ್ಳುವ ಯುದ್ಧ ಅಥವಾ ಶಾಂತಿಯ ಮಾರ್ಗವನ್ನು ಅವಲಂಬಿಸಿವೆ. ನಾವಿಂದು ಜಾತಿ, ಮತ, ಧರ್ಮ ಭೇದ ಮರೆತು, ಮಾನವೀಯತೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ, ಈ ಭೂಮಿಯ ಮೇಲಿನ ಸಕಲ ಜೀವರಾಶಿಗಳ ಒಳಿತಿಗಾಗಿ ಬದುಕನ್ನು ಕಟ್ಟುವ ಕೆಲಸಕ್ಕೆ ಕೈಜೋಡಿಸಬೇಕಾಗಿದೆ. ಎಂಬ ಸಂದೇಶ ಸಾ. ಶಿ. ಮರುಳಯ್ಯನವರ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ನೆಲೆಗಳಲ್ಲಿ ವಸ್ತುಸ್ಥಿತಿಯು ಸಮಕಾಲೀನ ಸಂದರ್ಭದ ಆಗುಹೋಗುಗಳು ಸಮಾಜಕ್ಕೆ ಉತ್ತಮವಾದ ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿವೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು ಆರ್. (1994). ಸಾಶಿಮ ಬದುಕು–ಬರಹ. ಶ್ರೀರಂಗ ಪ್ರಕಾಶನ.
- ಬೋರಲಿಂಗಯ್ಯ ಹಿ.ಶಿ. (ಸಂ.). (1976). ವಿಚಾರಕ್ರಾಂತಿ. ಪೃಥ್ವಿ ಪ್ರಕಾಶನ.
- ಹಿಮ್ಮಡಿ ವೈ.ಬಿ. (2006). *ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ಒಂದು ಅಧ್ಯಯನ.* ಕರ್ನಾಟಕ ವಿಶ್ವವಿದ್ಯಾಲಯ.
- ಕುವೆಂಪು. (1987). *ವಿಚಾರ ಕ್ರಾಂತಿಗೆ ಆಹ್ವಾನ.* ಕನ್ನಡ ಸಾಹಿತ್ಯ ಪರಿಷತ್ತು.
- ಮರುಳಯ್ಯ ಸಾ.ಶಿ. (2001). *ಸಮಗ್ರ ಕಾವ್ಯ.* ಸ್ವಪ್ನ ಬುಕ್ ಹೌಸ್.
- ಉಪಾಧ್ಯ ಜಿ.ಎನ್. (2005). *ವಿಚಾರದ ಬೆಳಕು.* ಅಭಿಜಿತ್ ಪ್ರಕಾಶನ.
- ವಿಜಯಲಕ್ಷ್ಮಿ ಕೆ.ಎಂ. (2004). *ಸಾಹಿತ್ಯ ಮತ್ತು ಸುತ್ತಣ ಸಮಾಜ.* ಕಿರಣ್ ಬುಕ್ ಡಿಸ್ಟ್ರಿಬ್ಯುಟರ್ಸ್.
- ವಾಗೀಷ ಎಂ. ಆರ್. (2012). *ಸಾ.ಶಿ. ಮರುಳಯ್ಯನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ.* ಮಧುರೈ ಕಾಮರಾಜ ವಿಶ್ವವಿದ್ಯಾಲಯ.